ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 60 (351) |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : ಶ್ರೀ. ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : 07.12.2023 |
| ಉತ್ತರಿಸಬೇಕಾದ ಸಚಿವರು | : ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | **ಆಲಮಟ್ಟಿ ಜಲಾಶಯದ ಎತ್ತರ ಎಷ್ಟು;** 3ನೇ ಹಂತದಲ್ಲಿ ಎಷ್ಟು ಮೀಟರ್‌ವರೆಗೆ ಎತ್ತರಿಸಲು ಯೋಜಿಸಲಾಗಿದೆ; ಇದರಿಂದ ಎಷ್ಟು ಟಿ.ಎಂ.ಸಿ ನೀರನ್ನು ಶೇಖರಿಸಬಹುದಾಗಿದೆ; (ವಿವರ ನೀಡುವುದು) | ಆಲಮಟ್ಟಿ ಜಲಾಶಯದ ಗೇಟಿನ ಎತ್ತರ ಪ್ರಸ್ತುತ ಆರ್.ಎಲ್. 519.60 ಮೀ. ಇರುತ್ತದೆ.<br><br>**ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಲ್ಲಿ ನೀರಿನ ಬಳಕೆಗಾಗಿ ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆ ಮಟ್ಟ ಆರ್.ಎಲ್.519.60 ಮೀ. ನಿಂದ ಆರ್.ಎಲ್.524.256 ಮೀ.ಗೆ (15ಅಡಿ)** ಎತ್ತರಿಸುವುದರಿಂದ ಹೆಚ್ಚುವರಿಯಾಗಿ 100 ಟಿ.ಎಂ.ಸಿ. ನೀರಿನ ಪ್ರಮಾಣವನ್ನು ಶೇಖರಿಸಬಹುದಾಗಿರುತ್ತದೆ. |
| (ಆ) | **ಆಲಮಟ್ಟಿ ಜಲಾಶಯಕ್ಕೆ ಎಷ್ಟು** ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ; 3ನೇ ಹಂತದ ಯೋಜನೆ ಪೂರ್ಣಗೊಳ್ಳಲು ಎಷ್ಟು ಜಮೀನು ಅವಶ್ಯಕತೆ ಇದೆ; ಇದಕ್ಕೆ ಬೇಕಾಗಿರುವ ಪರಿಹಾರದ ಮೊತ್ತ ಎಷ್ಟು; (ವಿವರ ನೀಡುವುದು) | **ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1 & 2ರಡಿಯ ಆಲಮಟ್ಟಿ** ಜಲಾಶಯಕ್ಕೆ 1,38,280 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ. ಇದರೊಂದಿಗೆ ಹಂತ-3ರಡಿ 75,563 ಎಕರೆ ಜಮೀನು ಮುಳುಗಡೆಯಾಗುತ್ತಿದ್ದು, ಭೂಸ್ವಾಧಿನ ಪಡಿಸಿಕೊಳ್ಳಲು ಕ್ರಮ ಜರುಗಿಸಲಾಗುತ್ತಿದೆ.<br><br>**ಕೃಷ್ಣಾ ಮೇಲ್ದಂಡೆ** ಯೋಜನೆ **ಹಂತ-3ರಡಿ** ಭೂಸ್ವಾಧೀನ ಗೊಳಿಸಬೇಕಾಗಿರುವ ಜಮೀನಿನ ವಿವರ ಈ **ಕೆಳಕಂಡಂತಿದೆ:**<br><br>ಕ್ರ ಸಂ \| ವಿವರ \| ಒಟ್ಟು (ಎಕರೆ)<br>1 \| 188 ಗ್ರಾಮಗಳಿಗೆ ಸಂಬಂಧಿಸಿದಂತೆ ಮುಳುಗಡೆ ಯಾಗುವ ಜಮೀನು \| 75,563<br>2 \| 20 ಮುಳುಗಡೆ ಗ್ರಾಮಗಳು & ಬಾಗಲಕೋಟೆ ಪಟ್ಟಣ ಪುನರ್ವಸತಿಗಾಗಿ \| 6,467<br>3 \| 9 ಉಪ ಯೋಜನೆಗಳ (ಕಾಲುವೆ ನಿರ್ಮಾಣ) \| 51,837<br>**ಒಟ್ಟು** \| 1,33,867<br><br>**ಈ ಪೈಕಿ ಇದುವರೆಗೂ 27,242 ಎಕರೆ ಜಮೀನು ಭೂಸ್ವಾಧೀನ** ಪಡಿಸಿಕೊಳ್ಳಲಾಗಿದೆ. 41,306 ಎಕರೆ ಕ್ಷೇತ್ರದ ಭೂಸ್ವಾಧೀನ ಪ್ರಕ್ರಿಯೆ ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತದೆ. 23,190 ಎಕರೆ ಕ್ಷೇತ್ರದ **ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಬೇಕಾಗಿರುತ್ತದೆ. ಬಾಕಿ ಉಳಿದಿರುವ 42,129 ಎಕರೆ ಭೂಸ್ವಾಧೀನ ಪ್ರಸ್ತಾವನೆ ತಯಾರಿಕಾ ಹಂತದಲ್ಲಿರುತ್ತದೆ..**<br><br>**ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಯೋಜನೆಯ ರೂ.51,148.94 ಕೋಟಿ ಪರಿಷ್ಕೃತ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಇದರಲ್ಲಿ ರೂ. 17627.00 ಕೋಟಿ** ಮೊತ್ತವನ್ನು ಭೂಸ್ವಾಧಿನಕ್ಕೆ ಮೀಸಲಿಡಲಾಗಿದೆ. |

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಇ) | 3ನೇ ಹಂತದ ಯೋಜನೆಯ ಪೂರ್ಣಗೊಳ್ಳಲು ವಿಳಂಬ ವಾಗುತ್ತಿರುವುದರಿಂದ ಯೋಜನೆಯ ಅಂದಾಜು ವೆಚ್ಚವು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಆದಷ್ಟು ಬೇಗ ಯೋಜನೆ ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಬಂದಿದೆ.<br><br>ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ಕ್ಕೆ ಸಂಬಂಧಿಸಿದಂತೆ ಆಲಮಟ್ಟಿ ಆಣೆಕಟ್ಟಿನ ಎತ್ತರವನ್ನು 519.60 ಮೀ. ದಿಂದ 524.256 ಮೀ. ಗೆ ಎತ್ತರಿಸುವ ಕಾಮಗಾರಿಯು ಕೇಂದ್ರ ಸರ್ಕಾರದಿಂದ ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪಿನ ಗೆಜೆಟ್ ಅಧಿಸೂಚನೆ ಹೊರಡಿಸುವ ಷರತ್ತಿಗೆ ಒಳಪಟ್ಟಿದ್ದು ಕೇಂದ್ರ ಸರ್ಕಾರದೊಂದಿಗೆ ಸಮನ್ವಯ ಸಾಧಿಸಿ ಗೆಜೆಟ್ ಅಧಿಸೂಚನೆ ಹೊರಡಿಸಲು ಕ್ರಮ ಕೈಗೊಂಡು ಶೀಘ್ರ ಅನುಷ್ಠಾನಕ್ಕೆ ಕ್ರಮ ಜರುಗಿಸಲಾಗುವುದು. |

ಸಂಖ್ಯೆ : ಜಸಂಇ 122 ಡಬ್ಲ್ಯೂಬಿಎಂ 2023

(ಡಿ.ಕೆ.ಶಿವಕುಮಾರ್)
ಉಪ ಮುಖ್ಯಮಂತ್ರಿಗಳು